

ಬರುವ ಮಜಾವನ್ನು ಬಣ್ಣಿಸಿ ಬಣ್ಣಿಸಿ ಆ ಘಮಲನ್ನು ಗಾಳಿಗೆ ತೂರಿದ್ದ. ಸದಾ ಅರೆ ಹಸಿದ ಹೊಟ್ಟೆಯಲ್ಲೇ ತಿರುಗಾಡಿಕೊಂಡಿರುತ್ತಿದ್ದ ಜಮೀಲನ ಬಾಯಲ್ಲಿ ನೀರು ಬುಳ ಬುಳನೆಂದು ಹರಿದಿತ್ತು.

ಅರ್ಷದನನ್ನು ಹಿಡಿದು ಸತಾಯಿಸಿದಾಗ ಶಬ್ಬೀರನ ಮೇಲೆ ಜಗಳ ಮಾಡಬಾರದೆಂದು ಅವನಮ್ಮ ಆಣೆ ಪ್ರಮಾಣ ಮಾಡಿಸಿಕೊಂಡಿದ್ದಳು. ಆ ಘಟನೆಯಾದ ನಂತರ ಜಮೀಲನೂ ಶಬ್ಬೀರನ ಮೇಲೆ ಹಲ್ಲು ಮಸೆಯುತ್ತಿದ್ದ. ಜೊತೆಗೆ ಶಬ್ಬೀರನ ಅಮ್ಮಿ ಅವಳ ಸ್ನೇಹಿತೆಯೇ ಆಗಿದ್ದು ಇನ್ನೊಂದು ಕಾರಣವಾಗಿತ್ತು.

ನಿಜಕ್ಕೂ ಜಮೀಲ ಶಬ್ಬೀರನ ಪಾರಿವಾಳವನ್ನು ಕದ್ದಿರಲಿಲ್ಲ. ಕಣಿವೆಯ ರಸ್ತೆಯಲ್ಲಿ ಕುಂಟುತ್ತ ಸಿಕ್ಕಿಬಿದ್ದ ಪಾರಿವಾಳವನ್ನು ಹಿಡಿದು ತಂದಿದ್ದ. ಹಾಗೆಂದು ಮಗ ಹೇಳಿದ್ದನ್ನು ನಂಬಿ ಅವರಾಗಲೆ ಅದನ್ನು ತಿಂದಾಗಿತ್ತು. ಸದ್ಯಕ್ಕೆ ಜಮೀಲ ಹೇಳಿದ್ದು ನಿಜವೋ ಸುಳ್ಳೋ ಅವರಿಗೂ ಬೇಕಿರಲಿಲ್ಲ. ನಿಜವೇ ಆಗಿದ್ದಲ್ಲಿ ತಪ್ಪೊಪ್ಪಿಕೊಂಡು ಮತ್ತೊಂದನ್ನು ಕೊಂಡು ಕೊಡಲು ಅವಮಾನದ ಭಯ ಕಾಡಿತ್ತು. ಅವನಿಗೆ ಶಬ್ಬೀರನ ಜೊತೆ ವೈರವಾದರೆ, ಅದೊಂದು ದೊಡ್ಡ ಮರವಾಗಿ ಬೆಳೆಯುವ ಬಗ್ಗೆ ಜಮೀಲನ ಅಮ್ಮಿಗೆ ಶಂಕೆಯಿರಲಿಲ್ಲ.

ಅಷ್ಟಕ್ಕೂ ಜಮೀಲನದು ಕುಳ್ಳಗಿನ ದೇಹ. ಹದಿಮೂರು ವರ್ಷದವನಾದರೂ ನುಣುಪಾದ ಕೆನ್ನೆ ಗಲ್ಲಗಳು ಅವನನ್ನು ಮತ್ತಷ್ಟು ಸಣ್ಣವನಂತೆ ಕಾಣುವಂತೆ ಮಾಡಿದ್ದವು. ಆದರೆ, ಒಳಗೊಳಗೆ ಜಮೀಲನಲ್ಲೂ ಪೌರುಷ ಬಲಿಯುತ್ತಿತ್ತು. ತನ್ನನ್ನು ಆಗಾಗ ಹುಡುಗಿಯಂಥ ಹುಡುಗ ಎಂದು ಎಲ್ಲರೆದುರು ಚುಡಾಯಿಸಿ ಗೇಲಿ ಮಾಡುವ ಶಬ್ಬೀರನ ಮೇಲೆ ಅವನಿಗೆ ಅಸದಳ ಕೋಪವಿತ್ತು.

ಎಲ್ಲರೆದುರು ತನ್ನನ್ನು ಅಸಡ್ಡೆ ಮಾಡುವ ಶಬ್ಬೀರನ ಮೇಲೆ ಸೇಡು ತೀರಿಸಿಕೊಳ್ಳಲು ಅವನು ಕಾಯುತ್ತಲೇ ಇದ್ದ. ಈಗ ತನ್ನ ತಮ್ಮನನ್ನು ಹೊಡೆದಿದ್ದ ಶಬ್ಬೀರ ಮತ್ತವನ ಗುಂಪಿನ ಮೇಲೆ ಜಮೀಲ ಸೇಡು ತೀರಿಸಿಕೊಳ್ಳಬೇಕಿತ್ತು.

ತಾನು ಕೆಲಸ ಹಿಡಿದಿದ್ದ ಸೈಕಲ್ ಶಾಪಿಗೆ ಜಮೀಲ ದಿನವೂ ಶಬ್ಬೀರನ ಮನೆಯ ಮುಂದಿನ ಗಲ್ಲಿಯಲ್ಲೇ ನಡೆದು ಹೋಗಬೇಕಿತ್ತು. ಆಗಲೇ ಅವನ ಕಣ್ಣಿಗೆ ಹಾರೊಡೆದ ಬಾಗಿಲು, ಶಬ್ಬೀರನ ಗುಕ್ಕುಡುತ್ತಿದ್ದ ಹೆಣ್ಣು ಪಾರಿವಾಳವೂ ಕಂಡಿತ್ತು. ಅದನ್ನು ನಿಜವಾಗಿ ಕದ್ದು ತಿಂದು ಸೇಡು ತೀರಿಸಿಕೊಳ್ಳಬೇಕು ಅಂದುಕೊಂಡ. ಆದರೆ, ಅದನ್ನು ತನ್ನ ಅಮ್ಮಿಗೆ ಕೊಡುವ ಧೈರ್ಯ ಅವನಲ್ಲಿ ಇರಲಿಲ್ಲ. ಬಾಯಿಗೆ ಬರದ ಈ ಊಟ ಅವನಿಗೆ ಮೊದ ಮೊದಲಿಗೆ ವರ್ಜ್ಯವಾಗಿಯೇ ಕಂಡಿತು. ನಾಲ್ಕಾರು ದಿನ ಕಳೆದ ನಂತರ, ಆ ಪಾರಿವಾಳವನ್ನು ಗಾಳಿಗೆ ತೂರಿಯಾದರೂ ಸೇಡು ತೀರಿಸಿಕೊಳ್ಳಬೇಕೆನ್ನುವ ಹಂಬಲ ಬೆಳೆಯತೊಡಗಿತು.

ಶಬ್ಬೀರ ಅವನಿಗಿಂತ ಮೊದಲೇ ಬಟ್ಟೆ ಮಾರಲು ಹೋಗುತ್ತಿದ್ದ ಕಾರಣ, ಅವನ ಅಮ್ಮನ ಕಣ್ಣು ತಪ್ಪಿಸಿ ಪಂಜರದ ಬಾಗಿಲನ್ನು ತೆರೆದು ಓಡಿಬಿಟ್ಟರೆ ತನ್ನ ಕೆಲಸ ಮುಗಿಯುತ್ತದೆಂಬ ಲೆಕ್ಕಾಚಾರದಲ್ಲೇ ಅವನು ಸೈಕಲ್ ಚಕ್ರಗಳಿಗೆ ಪಂಕ್ಚರ್ ಹಾಕಿ ಗಾಳಿ ಒತ್ತುವಂತೆ ತನ್ನ ಆಸೆಗಳಿಗೆ ಹವಾ ತುಂಬತೊಡಗಿದ್ದ.

## 5

ಗಡಿರೇಖೆಗಳ ನಿಯಮಗಳ ಅರಿವೇ ಇಲ್ಲದಂತೆ, ಎರಡೂ ಕಡೆಯ ಮರಗಳಲ್ಲಿ ಗೂಡುಕಟ್ಟಿ ಸ್ವತಂತ್ರವಾಗಿ ಹಾರಾಡಿಕೊಂಡು ಶಾಂತಿ ಕಾಪಾಡಿಕೊಂಡಿದ್ದವು ಪಾರಿವಾಳಗಳು ಮಾತ್ರ. ಅದರಲ್ಲಿ ಒಂದು ಹೆಣ್ಣು ಪಾರಿವಾಳ ಹೊಂಚುಹಾಕಿ ಕಾಯುತ್ತಿದ್ದವರ ಬಲೆಗೆ ಸಿಲುಕಿ, ಇದೀಗ ಇಬ್ಬರು ಚಿಣ್ಣರ ನಡುವಿನ ತೋರಿಕೆಯ ಶಾಂತಿಯನ್ನು ಕೆಣಕುವ ಅರಿವೇ ಇಲ್ಲದೆ ಗುಕ್ಕುಡುತ್ತ ತನ್ನ ಪಂಜರದಲ್ಲಿ ಶತ ಪಥ ತಿರುಗಿ ಕತ್ತನ್ನು ಉದ್ದಕ್ಕು, ಸಣ್ಣಗು ಮಾಡುತ್ತ ಆಗೀಗ ಕಾಲ ಕೆಳಗಿನ ಕಾಳನ್ನು ಕುಕ್ಕುತ್ತಿತ್ತು.

ಕಿರ್ರೆನ್ನುವ ಬಾಗಿಲನ್ನು ಮುಂದೂಡುತ್ತ ಮೆತ್ತಗೆ ಒಳಬಂದ ಜಮೀಲನನ್ನು ಕಂಡ ಆ ಪಾರಿವಾಳ ಗಕ್ಕನೆ ನಿಂತು ತನ್ನ ಬೆದರಿದ ಕೆಂಪು ಕಂಗಳಲ್ಲಿ ಅವನೆಡೆ ದಿಟ್ಟಿಸಿತು. ಆ ಕ್ಷಣದಲ್ಲಿ ಜಮೀಲನ ಕಣ್ಣುಗಳು ಪಾರಿವಾಳದ ಕಣ್ಣಿನೊಂದಿಗೆ ದೃಷ್ಟಿ ಕೂಡಿಸಿದವು. ಅಲ್ಲಿದ್ದ ಬೆದರಿಕೆ ಜಮೀಲನನ್ನು ಅರೆಕ್ಷಣ ನಿಧಾನಿಸಿದವು. ಅವನು ಪಂಜರದ ಚಿಲಕಕ್ಕೆ ಕೈ ಹಾಕುವ ಹೊತ್ತಿಗೆ ಹೊರಗೆ 'ಅಮ್ಮೀ' ಎನ್ನುವ ನೋವಿನ ಕೂಗು ಕೇಳಿಸಿತು. ಅದರ ಹಿಂದೆಯೇ ಓಡು ಹೆಜ್ಜೆಯ ಸಪ್ಪಳ.

ಈಗ ಬೆದರಿದ ಪಾರಿವಾಳವೇ ಆಗಿಹೋದ ಜಮೀಲ ಅಲ್ಲಿಯೇ ಒಟ್ಟಿದ್ದ ಕೆಲವು ಗೋಣಿಚೀಲಗಳ ಹಿಂದೆ ಅಡಗಿ ಕುಳಿತ. ದಡುಮ್ಮನೆ ಒಳನುಗ್ಗಿದ ಶಬ್ಬೀರನ ಮುಖದ ತುಂಬ ಆತಂಕ ತುಂಬಿತ್ತು. ಆ ಚಳಿಯಲ್ಲೂ ಧಾರಾಕಾರ ಬೆವರುತ್ತಿದ್ದ ಅವನ ಧಾವಂತ ನೋಡಿ ಜಮೀಲನ ಕಣ್ಣುಗಳು ಗರಬಡಿದು ಹೋದವು. ದಡಬಡನೆಂದು ಮನೆಯನ್ನೆಲ್ಲ ಹುಡುಕಿ ತನ್ನ ಅಮ್ಮೀ ಮನೆಯಲ್ಲಿಲ್ಲದ್ದನ್ನು ಕಂಡು ಬಂದ ವೇಗದಲ್ಲೇ ಅವನು ಹೊರಕ್ಕೋಡಿದ. ಕುಂತಲ್ಲೇ ಕೂತು ತರತರನೆ ನಡುಗುತ್ತಿದ್ದ ಜಮೀಲ ದೊಡ್ಡ ಉಸಿರೆಳೆದುಕೊಳ್ಳುವ ವೇಳೆಗೆ, ಮತ್ತೂ ಹತ್ತು ಜನರ ಕಿರುಚಾಟ, ಕೂಗಾಟ ಹೊರಗಿನಿಂದ ಕೇಳಿಬಂತು.

ಇದೀಗ ಜಮೀಲ ಪಾರಿವಾಳವನ್ನು ಹೊರಕ್ಕೆ ಬಿಡುವುದಿರಲಿ, ಅದರೊಡನೆ ಕಾಣಿಸಿಕೊಂಡರೆ ಅವನ ಗ್ರಹಚಾರ ಕೆಡುತ್ತಿತ್ತು. ಯಾರ ಕಣ್ಣಿಗೆ ಬಿದ್ದರೂ ಅದು ಅಪಾಯಕಾರಿಯಾಗಿತ್ತು. ಈ ಕಾರಣ ಜಮೀಲನ ಧ್ವನಿ ಸ್ವಲ್ಪ ದೂರ ಹೋದ ಕೂಡಲೇ ಜಮೀಲ ಮುದುಡಿ ಹೊರಬಂದು ಓಡತೊಡಗಿದ. ಅನತಿದೂರದಲ್ಲಿ ಹೊಗೆಯೂ ಬೆಂಕಿಯೂ ಜೊತೆಗೆ ಜನರ ಕೂಗಾಟಗಳೂ ಕೇಳಿಬಂದು ಅವನಿಗೆ ಏನಾಗುತ್ತಿದೆ ಎನ್ನುವುದೇ ತಿಳಿಯದಾಗಿ ನಿಧಾನಗೊಂಡ.

ಚಾಯದಂಗಡಿ ಕಾಕನ ಸುತ್ತ ನಿಂತಿದ್ದ ಜನರು, ಅಬ್ಬಾಸನ ಬಟ್ಟೆಯಂಗಡಿಯಲ್ಲಿ ಅಚಾನಕ್ ಬಾಟಲಿ ಬಾಂಬೊಂದು ಸ್ಫೋಟಗೊಂಡು ಅಬ್ಬಾಸನಿಗೆ ಸುಟ್ಟ ಗಾಯಗಳಾಗಿವೆಯೆಂದೂ ಮಾತಾಡಿಕೊಳ್ಳುತ್ತಿದ್ದರು. ಅವನ ಬಟ್ಟೆಗಂಟುಗಳ ನಡುವೆ ಬಾಟಲಿ ಬಾಂಬನ್ನು ಯಾರು ಯಾಕೆ ಇಟ್ಟಿದ್ದರೆಂಬ ಬಗ್ಗೆ ಗುಸು ಗುಸು ಕೇಳಿಬರುತ್ತಿತ್ತು.

ಅಬ್ಬಾನ ಸಹಾಯಕ್ಕೆ ನಿಲ್ಲದೆ ಅಮ್ಮೀಯನ್ನು ಕರೆತರುವ ನೆಪದಲ್ಲಿ ಓಡಿಬಂದಿದ್ದ ಶಬ್ಬೀರನ ಮುಖ ಜಮೀಲನಿಗೆ ನೆನಪಾಯಿತು. ಮತ್ಯಾರ ಮೇಲೋ ತನ್ನ ಬಾಟಲಿ ಬಾಂಬಿನ ಪ್ರಯೋಗ ಮಾಡಲೆಂದೇ ಶಬ್ಬೀರನೇ ಇರಿಸಿದ ಬಾಂಬಿರಬೇಕೆಂಬ ಬಗ್ಗೆ ಜಮೀಲನಿಗೆ ಸಂಶಯವಿರಲಿಲ್ಲ. ಇದೀಗ ಜಮೀಲನನ್ನು ಬೇಟೆಯಾಡಲು ಸೈನಿಕರು ಶುರುಮಾಡಿಕೊಂಡಿರಬಹುದೆಂದು ಊಹಿಸಿದ. ಅವನ ಚಿತ್ತದಲ್ಲಿ ತನ್ನ ಪಂಜರದಲ್ಲೇ ಬೆದರಿ ನಿಂತಿದ್ದ ಶಬ್ಬೀರನ ಪಾರಿವಾಳದ ಮುಖ ನೆನಪಿಗೆ ಬಂತು.

ಆ ಗಲಿಬಿಲಿಯಲ್ಲಿ ಗಾಳಿಹೋದ ಟೈಯರಿನಂತೆ ತನ್ನ ಸೈಕಲ್ ಶಾಪಿನೆಡೆಗೆ ಜಮೀಲ, ನಿಧಾನವಾಗಿ ಹೆಜ್ಜೆ ಹಾಕಿದ.

ಪ್ರತಿಕ್ರಿಯಿಸಿ: feedback@sudha.co.in